ಓ .ಎಸ್ ನಂಃ 46/2016
ಪಿಡಬ್ಲ್ಯೂಃ 1
ದಿನಾಂಕಃ 29.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ವಾರಸುದಾರರ ಪರ ಶ್ರೀ ಪಿ ಎನ್ ಕೆ ವಕೀಲರಿಂದಃ

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ . ನಾನು 10 ನೇ ತರಗತಿವರೆಗೂ ಓದಿರುತ್ತೇನೆ. ನನ್ನ ತಂದೆಗೆ ಸೇರಿದ ನಿವೇಶನ ಬೇತಮಂಗಲದಲ್ಲಿ ಇದೆ ಎಂದರೆ ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ನನಗೆ ಆ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 04.03.2023 ರಂದು ವಾದ ಪತ್ರ ತಿದ್ದುಪಡಿ ಮಾಡಲು ನಾನು ಅರ್ಜಿ ಹಾಕಿರುತ್ತೇನೆ. ಸದರಿ ಮಧ್ಯಂತರ ಅರ್ಜಿ ದಾವಾ ಐಟಂ ನಂಬರ್ 21 ನ್ನು ದಾವೆಯಲ್ಲಿ ಸೇರಿಸಲು ಕೇಳಿಕೊಂಡಿರುತ್ತೇನೆ ಎಂದರೆ ಸರಿ . ದಿನಾಂಕ 15.02.2016 ರ ದಾನ ಪತ್ರವನ್ನು 1 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ಮಾಡಿದ್ದು ಎಂದು ಸದರಿ ದಾಖಲೆಯನ್ನು ತೋರಿಸಿ ಕೇಳಲಾಗಿ ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ನನಗೆ ದಾವಾ ಐಟಂ ನಂಬರ್ 21 ರ ವರ್ಗಾವಣೆ ಬಗ್ಗೆ ಗೊತ್ತಿದ್ದರೂ ಸಹ 1 ಮತ್ತು 4 ನೇ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ 1, 3 ಮತ್ತು 4 ರವರೊಡನೆ ಸೇರಿ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **6** ನೇ ಪ್ರತಿವಾದಿ ಪರ ಶ್ರೀ ಟಿ ಆರ್ ವಕೀಲರಿಂದಃ

1 ನೇ ಪ್ರತಿವಾದಿ ನಂಜುಂಡಪ್ಪ ನನ್ನ ತಂದೆ . 6 ನೇ ಪ್ರತಿವಾದಿಯ ತಂದೆ ಹೆಸರು ಏನು ಎನ್ನಲಾಗಿ ನಂಜುಂಡಪ್ಪ ಎನ್ನುತ್ತಾರೆ. 6 ನೇ ಪ್ರತಿವಾದಿಯ ತಂದೆ ನನಗೆ ಏನಾಗಬೇಕು ಎಂದರೆ ದೊಡ್ಡಪ್ಪ ಎನ್ನುತ್ತಾರೆ. ಐಟಂ ನಂಬರ್ 7, 6 ನೇ ಪ್ರತಿವಾದಿಯ ತಂದೆಗೆ ಸೇರಿದ ಆಸ್ತಿ ಎಂದರೆ ಸರಿ . ಅದು ಅವರ ಪಿತ್ರಾರ್ಜಿತ ಆಸ್ತಿಎಂದರೆ ಸರಿ . ಸದರಿ ಆಸ್ತಿಯಲ್ಲಿ ನನ್ನ ದೊಡ್ಡಪ್ಪ ಅವರ ಮಗಳಿಗೆ 34 ಗುಂಟೆಯನ್ನು ವಿಭಾಗ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿ . ಸರ್ವೆ ನಂಬರ್ 152 ರಲ್ಲಿ 1976 ರಿಂದ 1994-95 ರವರೆಗೂ ಪ್ರತಿವಾದಿಯವರ ತಂದೆಯ ತಂದೆ ಹೆಸರಿಗೆ ಪಹಣಿ ಬರುತ್ತಾ ಇತ್ತು ಎಂದರೆ ಸರಿ. 1994-95 ರಲ್ಲಿ ಪ್ರತಿವಾದಿ 6 ರವರ ತಂದೆ ಹೆಸರು ಮತ್ತು ನನ್ನ ತಂದೆ ಹೆಸರು ಒಂದೇ ಆದುದರಿಂದ ಐಟಂ ನಂಬರ್ 7 ನ್ನು ನಮ್ಮ ಕುಟುಂಬದ ಭಾಗ ಪತ್ರದಲ್ಲಿ ಸೇರಿಸಿ

ಕೊಂಡಿರುತ್ತೇವೆ ಎಂದರೆ ಸರಿ . ಸಾಕ್ಷಿಗೆ 1976-77 ರಿಂದ 2001 ರಿಂದ 2002 ರವರೆಗಿನ 3 ಆರ್ ಟಿ ಸಿ ಗಳನ್ನು ಮತ್ತು ಒಂದು ಮ್ಯುಟೇಷನನ್ನು ತೋರಿಸಲಾಗಿ ಅವುಗಳನ್ನು ಒಪ್ಪಿಕೊಂಡಿರುತ್ತಾರೆ. ಅವುಗಳನ್ನು ನಿಡಿ 11 ರಿಂದ 14 ಎಂದು ಗುರುತಿಸಲಾಯಿತು. ಐಟಂ ನಂಬರ್ 7 ನ್ನು 6 ನೇ ಪ್ರತಿವಾದಿಯವರ ಕುಟುಂಬದವರೇ 60-70 ವರ್ಷಗಳಿಂದ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ . ದಿನಾಂಕ 30.09.2022 ರಂದು ತಿದ್ದುಪಡಿ ಅರ್ಜಿ ಸಲ್ಲಿಸಿ ಆ ಅರ್ಜಿಯಲ್ಲಿ ದಾವಾ ಐಟಂ ನಂಬರ್ 7 ನಮ್ಮ ಕುಟುಂಬಕ್ಕೆ ಸೇರಿಲ್ಲ ಎಂದು ಹೇಳಿರುತ್ತೇವೆ ಎಂದರೆ ಸರಿ . ಆದ ಕಾರಣ ಐಟಂ ನಂಬರ್ 7 ರಲ್ಲಿ ನಮಗಾಗಲೀ ನಮ್ಮ ಕುಟುಂಬದವರಿಗಾಗಲೀ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿ . ನಾವೆಲ್ಲಾ ವಾದಿ ಗಳು ಮತ್ತು 1 ರಿಂದ 4 ನೇ ಪ್ರತಿವಾದಿಗಳು ಸೇರಿ 6 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಐಟಂ ನಂಬರ್ 7 ನ್ನು ದಾವೆಯಲ್ಲಿ ಸೇರಿಸಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್